1907ನೆ ಇಸವಿ ಮೇ 25ನೆ ತಾರೀಖು ಇಸ್ತಿಹಾರಿನ ಅಬ್‌ಸ್ಟ್ರಾಕ್ಟು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:— ಸ೯ 1907ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1908ನೆ ಜೂ೯ ಆಖೈರುವರಿಗಾಗುವ 12 ಮಾಹೆಗಳಲ್ಲಿ ಹೊಳೀನರಸೀಪುರದ ಸೇತುವೆ ಬಳಿ ಇಟ್ಟಿರುವ ಟೋಲ್‌ಗೇಟಿ ಬಳಿ ಸುಂಕ ವಸೂಲ್ಮಾಡುವ ಹಕ್ಕನ್ನು 1907ನೆ ಇಸವಿ ಜೂ೯ ಮಾಹೆ 20ನೆ ತಾರೀಖು ಗುರುವಾರ ಹೊಳೀನರಸೀಪುರದ ತಾಲ್ಲೂಕ್ ಕಛೇರಿಯಲ್ಲಿ ಜನರಲ್ ಅಸಿಸ್ಟೆಂಟ್ ಕಮಿಷನರವರ ರೂಬರೂಬ್ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಷರಾ:— ಹರಾಜು ಷರತ್ತು ವಗೈರೆಯನ್ನು 1907ನೆ ಇಸವಿ ಮೇ 30ನೆ ಮು॥ 22ನೆ ನಂ. ಮೈಸೂರ ಗೆಜೆಟ್ಟಿನ ಎರಡನೆ ಭಾಗದಲ್ಲಿ 255ನೆ ಪುಟದಲ್ಲಿ ಪ್ರಿಂಟಾಗಿರುವದನ್ನು ನೋಡಿಕೊಳ್ಳತಕ್ಕದ್ದು.

1907ನೆ ಇಸವಿ ಮೇ 25ನೆ ತಾರೀಖು ಇಸ್ತಿಹಾರಿನ ಅಬ್‌ಸ್ಟ್ರಾಕ್ಟು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:— ಹಾಸನ ಡಿಸ್ಟ್ರಿಕ್ಟು ಮಂಜರಾಬಾದು ತಾಲ್ಲೂಕಿನಲ್ಲಿರುವ ಮಾರ್ನಹಳ್ಳಿ ಟೋಲ್‌ಗೇಟಿನಲ್ಲಿ ಸ೯ 1907ನೆ ಇಸವಿ ಜುಲೈ ಮಾಹೆ 1ನೆ ತಾರೀಖು ಲಾಗಾಯಿತು ಸ೯ 1908ನೆ ಜೂ೯ 30ರ ವರೆಗಿನ 12 ತಿಂಗಳ ಕಾಲದಲ್ಲಿ ಸುಂಕ ವಸೂಲ್ಮಾಡುವ ಸ್ವಾತಂತ್ರ್ಯವು 1907ನೆ ಇಸವಿ ಜೂ೯ ಮಾಹೆ ತಾರೀಖು 12ನೆ ಬುಧವಾರ ಹಗಲು 12 ಘಂಟೆಗೆ ಮಂಜರಾಬಾದು ತಾಲ್ಲೂಕು ಕಛೇರಿಬಳಿ ಸಕ್ಲೇಶಪುರದ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರ ರೂಬರೂಬ್ ಬಹಿರಂಗವಾಗಿ ಹರಾಜ್ ಮೂಲಕ ನಿಕ್ಕಯಿಸಲ್ಪಡುತ್ತೆ.

ಷರಾ:— ಹರಾಜು ಷರತ್ತು ವಗೈರೆಯನ್ನು 1907ನೆ ಇಸವಿ ಮೇ 30ನೆ ಮು॥ 22ನೆ ನಂ. ಮೈಸೂರು ಗೆಜೆಟ್ಟಿನ ಎರಡನೆ ಭಾಗದಲ್ಲಿ 253ನೆ ಪುಟದಲ್ಲಿ ಪ್ರಿಂಟಾಗಿರುವದನ್ನು ನೋಡಿಕೊಳ್ಳತಕ್ಕದ್ದು.

1907ನೆ ಇಸವಿ ಮೇ 14ನೆ ತಾರೀಖು ಇಸ್ತಿಹಾರಿನ ಅಬ್‌ಸ್ಟ್ರಾಕ್ಟು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:— ಸ೯ 1907ನೆ ಜುಲೈ ಗುರ್ರೆ ಲಾಗಾಯಿತು 1908ನೆ ಜೂ೯ ಆಖೈರುವರಿಗಾಗುವ 12 ತಿಂಗಳುಗಳಲ್ಲಿ ಹಾಸನ-ಅರಸೀಕೆರೆ ರಸ್ತೆಮೇಲೆ ದುದ್ದದ ಬಳಿ ಇಟ್ಟಿರುವ ಟೋಲ್‌ಗೇಟು ಬಳಿ ಸುಂಕ ವಸೂಲ್ಮಾಡುವ ಹಕ್ಕನ್ನು 1907ನೆ ಇಸವಿ ಜೂ೯ 8ನೆ ತಾರೀಖು ಶನಿವಾರ ಮಧ್ಯಾನ್ನ 12 ಘಂಟೆಗೆ ಹಾಸನ ಡಿಸ್ಟ್ರಿಕ್ಟು ಡೆಪ್ಯೂಟಿ ಕಮಿಷನರವರ ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಷರಾ:— ಹರಾಜು ಷರತ್ತು ವಗೈರೆಯನ್ನು 1907ನೆ ಇಸವಿ ಮೇ 30ನೆ ಮು॥ 22ನೆ ನಂ. ಮೈಸೂರು ಗೆಜೆಟ್ಟಿನ ಎರಡನೆ ಭಾಗದಲ್ಲಿ 252ನೆ ಪುಟದಲ್ಲಿ ಪ್ರಿಂಟಾಗಿರುವದನ್ನು ನೋಡಿಕೊಳ್ಳತಕ್ಕದ್ದು.

ಕೆ. ಆರ್. ಶ್ರೀನಿವಾಸ್ಸಯ್ಯಂಗಾರ್,
ಡೆಪ್ಯೂಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ನೋಟಿಸ್.

ತಾರೀಖು 17ನೆ ಮೇ 1907.

ಚಿಕ್ಕಮಗಳೂರು, ತರೀಕೆರೆ, ಎಡೇಹಳ್ಳಿ ಮತ್ತು ಕೊಪ್ಪ ಮ್ಯುನಿಸಿಪಾಲಿಟಿಗಳಲ್ಲಿಯೂ ಮತ್ತು ಸಕ್ಕೆಪಟ್ಣ ಯೂನಿಯನ್ನಲ್ಲಿಯೂ ನಡೆಯುವ ಸಂತೆಗಳಲ್ಲಿನ ಸ೯ 1907ನೆ ಇಸವಿ ಜುಲೈ 1ರ ಲಾಗಾಯಿತು ಸ೯ 1908ನೆ ಇಸವಿ ಜೂ೯ 30ರ ವರೆವಿಗೆ ತೆರಿಗೆ ವಸೂಲ್ಮಾಡುವ ಹಕ್ಕು ದಾರಿಯನ್ನು ಪರಸ್ಪರ ಚಿಕ್ಕಮಗಳೂರು ವೈಸ್ ಪ್ರೆಸಿಡೆಂಟ್‌ರವರು ಎಡೇಹಳ್ಳಿ ತಾಲ್ಲೂಕು ಡೆಪ್ಯೂಟಿ ಅಮಲ್‌ದಾರ್‌ರವರು ಮತ್ತು ಕಡೂರು ತಾಲ್ಲೂಕು ಅಮಲ್ದಾರ್‌ರವರು ತಮ್ಮ ತಮ್ಮ ಆಫೀಸುಗಳಲ್ಲಿ ಈ ಕೆಳಗೆ ಪ್ರತಿ ಬಂದು ಸ್ಥಳದ ಬಾಜೂದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ದಿವಿ 11 ಘಂಟೆಗೆ ಸರಿಯಾಗಿ ಬಹಿರಂಗವಾಗಿ ಹರಾಜು ಮಾಡಿಸುತ್ತಾರೆ.

ಜಾಸ್ತಿ ತಪಶೀಲ್ ಅವಶ್ಯವಿದ್ದಲ್ಲಿ 1907ನೆ ಮೇ ಮಾಹೆ 30ನೆ ಮುರ್ತುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 258-259ನೆ ಪೇಜುಗಳಲ್ಲಿ ಪಬ್ಲಿಷ್ ಆಗಿರುವ ನೋಟಿಫಿಕೇಷನ್ ನೋಡಿಕೊಳ್ಳತಕ್ಕದ್ದು.

ಎಂ. ಲಕ್ಷ್ಮಣ ಶಾಸ್ತ್ರಿ, ಛಾರ್ಜ್ ಪ್ರೆಸಿಡೆಂಟ್.

ಇಸ್ತಿಹಾರ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟ್‌ನಲ್ಲಿ.

ಸ೯ 1906—07ನೆ ಇಸವಿ ಸ್ಮಾಲ್‌ಕಾಸ್ ನಂಬರು 627—06-07.

ವಾದಿ.

ಬೆಂಗಳೂರು ತಾಲ್ಲೂಕು ಹೆಸರುಘಟ್ಟದ ಹೋಬಳಿ ಜೋಶಿ ಏವರಖಂಡಪುರದ ವೃತ್ತಿದಾರರು—
1ನೆ ಪುಲಿಮೊದಲ್ ಶಿವಪ್ಪ, 2ನೆ ವಾಡಾಲ ತಿಮ್ಮಪ್ಪ ಶಾಸ್ತ್ರಿ, 3ನೆ ರಾಮಕೃಷ್ಣಯ್ಯ, 4ನೆ ಶ್ರೀನಿವಾಸೈಯ್ಯ.

Versus

ಪ್ರತಿವಾದಿ.

ಬೆಂಗಳೂರು ತಾಲ್ಲೂಕು ಹೆಸರುಘಟ್ಟದ ಹೋಬಳಿ ಏವರಖಂಡಪುರದಲ್ಲಿರುವ ಸಂಬಿಗೆ ವೆಂಕಟರಾಮೈಯ್ಯನ ಮಗ ರಮಣಯ್ಯ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ:—ಮೇಲ್ಕಂಡ ವಾದಿಗಳು ಪ್ರತಿವಾದಿಯ ಮೇಲೆ 140 ರೂಪಾಯಿಗಾಗಿ ಈ ಕೋರ್ಟ್‌ನಲ್ಲಿ ವ್ಯಾಜ್ಯ ತಂದಿರುತ್ತಾರೆ. ಸದರಿ ಮೊಬಲ್ಲಗೆಯು ಪ್ರತಿವಾದಿಯ ಹಾಜರಿಗಾಗಿ 1907ನೆ ಇಸವಿ ಜೂ೯

ಮಾಹೆ 27ನೆ ತಾರೀಖಿನ ದಿನ ಹಿಯರಿಂಗಿಗಾಗಿಟ್ಟಿರುತ್ತೆ. ಆದ್ದರಿಂದ ಈ ವೊಖದ್ದಮೆಯಲ್ಲಿ ವಾದಿ ಸ್ಥಾನಕ್ಕೆ ಕೇರಬೇಕೆಂಬ ವೈತ್ತಿದಾರರು ಎಲ್ಲಾ ಆ ದಿನ ಈ ಕೋರ್ಟ್ ರೂಬುರೂಬು ದಿವಿ 11 ಘಂಟೆಗೆ ಹಾಜರಾಗಬೇಕೆಂದು ಇದರ ಧೆಕೆಯಿಂದ ಇಸ್ತಿಹಾರ್ ಕೊಡೋಣಾಗಿದೆ.

ಸ. 1907ನೆ ಇಸವಿ ಜೂ. ತಾರೀಖು 11ನೆ ಮರ್ಕುಂ ನಮ್ಮ ದಸ್ತಖತ್ ನಿಶಿ ಕೊಡಲ್ಪಟ್ಟಿತು.

ಜೆ. ಹೆಚ್. ಭಾಭಾ,
ಸಬಾರ್ಡಿನೇಟ್ ಜಡ್ಜ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿನಿಂದ.

ಇಸ್ತಿಹಾರ್.

ತಾರೀಖು, ನೇ ಜೂ. 1907.

ಇದರಿಂದ ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಗೌರ್ನಮೆಂಟಿನಿಂದ ಸಾದರಾದ 29—6—1901ನೆ ಮ ನಂ. 17691—L. B. (P) 633ನೆ ನಂಬರ್ ಪ್ರೊಸೀಡಿಂಗ್ಸ್ ಅನುಸಾರ ಇದರ ಮಾರ್ಜಿನ್ನಲ್ಲಿ ತೋರಿಸಿರುವ ಬೆಂಗಳೂರು ಸಿಟಿ ಬಸವನಗುಡಿ ಎಕ್ಸ್‌ಟೆಂಷನ್‌ಗೆ ಸೇರಿದ ಕಟ್ಟಡ ಕಟ್ಟತಕ್ಕ ಸೈಟುಗಳನ್ನು 1907ನೆ ಇಸವಿ ಜೂ. ತಾ॥ 17 ರಲ್ಲು ಹರಾಜು ಮೂಲಕ ವಿಲೇವಾರಿಯಿಸತಕ್ಕದ್ದೆಂದು ನಿಶ್ಚಯಿಸಿರುತ್ತಾಗಿ ಹರಾಜಿನಲ್ಲಿ ಛಡಿ ಸವಾಲ್ ಮೂಲಕ ಪಡದುಕೊಳ್ಳಲು ಇಷ್ಟಪಟ್ಟವರು ಅದೇ ತಾರೀಖು ಪ್ರಾತಃಕಾಲ 7½ ಘಂಟೆ ಲಾಗಾಯಿತು ಆಯಾಯ ಸೈಟುಗಳ ಬಳಿ ಹಾಜರಾದ್ದು ಛಡಿ ಸವಾಲ್ ಮೂಲಕ ಈ ಕೆಳಗೆ ಕಂಡ ಷರತ್ತುಗಳಿಗೆ ವಳಪಟ್ಟು ಛಡಿ ಸವಾಲ್‌ನಲ್ಲಿ ಪಡದುಕೊಳ್ಳಬಹುದಾಗಿರುತ್ತೆ. ಆ ದಿವಸ ಹರಾಜು ಪೂರೈಸದೆ ನಿಲ್ಲುವ ಸೈಟುಗಳನ್ನು ಮೂರು ದಿವಸಗಳಲ್ಲಿ ಅದೇ ಟೈಮಿನಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಬಸವನಗುಡಿ ಎಕ್ಸ್‌ಟೆಂಷನ್.		ಅಳತೆ.
2ನೆ ಬ್ಲಾಕ್	.... 234—235—236—237—238—239—240—241—242—243—244—245—246—247	120 × 30
5ನೆ ಬ್ಲಾಕ್	... 19 ...	100 × 30

1. ಹರಾಜು ಖೈದಾದ ಕೂಡಲೆ ಛಡಿ ಸವಾಲ್ ವೊಬಲಗಿನಲ್ಲಿ ಕೇಕಡಾ 25 ರೂಪಾಯಿನಂತೆ ಆಗುವ ವೊಬಲಗನ್ನ ಶೇವಣಿ ಇಡಬೇಕು. ಹಾಗಿಡದೆ ತಪ್ಪಿದರೆ ಕೂಡ್ಲೆ ದುಸರಾ ಹರಾಜು ಮಾಡಿಸಿ ಬರುವ ಲುಕ್ಸಾನಿಗೆ ವೊದಲು ಛಡಿಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯಿತು 15 ದಿವಸದೊಳಗೆಂಗ ಬಾಕಿ ನಿಲ್ಲುವ ವೊಬಲಗೆಂದರೆ ಛಡಿಸವಾಲ್ ವೊಬಲ್ಗೆ ನಿರ್ತಿಯಾಗಿ ಕೊಡತಕ್ಕ ಶೇಕಡಾ 75 ರೂಪಾಯಿನಂತೆ ಆಗುವ ವೊಬಲಗನ್ನ ಛಡಿಸವಾಲ್‌ದಾರ ಹಾಜರಪಡಿಸಿ ರಸೀತಿ ಪಡಿಯಬೇಕು. ಇದಕ್ಕೆ ತಪ್ಪಿದರೆ ಶೇವಣಿ ವೊಬಲಗನ್ನ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಪುನಹ ಅಂಥಾ ಸೈಟನ್ನ ದುಸರಾ ಹರಾಜಿಗೆ ಈಡುಮಾಡಿ ಬರುವ ನಷ್ಟಕ್ಕೆ ವೊದಲು ಛಡಿಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

3. ಹರಾಜು ಮುಂಜಾರಾದ ಕೂಡ್ಲೆ ಸೈಟನ್ನ ಛಡಿಸವಾಲ್‌ದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕ್ರೆಲಸವನ್ನ ಸುರೂ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಾಂಬಿಗೆ ಕಡಿವೆ ಇಲ್ಲದಷ್ಟು ಜಾಗವನ್ನು ಮೇಲೆ ಚಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕದ್ದಕ್ಕಾಗಿ ಯಾವಾಗಲೂ ಬಿಟ್ಟಿರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಾ ವಗೈರೆ ಸ್ಯಾನಿಟೆರಿ ಇಂಜನಿಯರವರಿಂದ ಮಂಜೂರಾಗುವ ವರಿಗೂ ಯಾವಕಟ್ಟಡವನ್ನೂ ಪ್ರಾರಂಭಿಸಕೂಡದು. ಮಾಳಿಗೆ ಮನೆಯನ್ನು ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹೆಂಚಿನದಾಗಿಯಾಗಲಿ ಅಥವಾ ತಾರಕೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಮಟ್ಟವು ರೋಜೀನಾ ಪಾಕೀಜಾ ಬಗ್ಗೆ ಕಕ್ಕಸ ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟತಕ್ಕ ವೊಹರಿ ತರಹೆ ಮತ್ತು ಜಾಗ ಸಹ ಸ್ಯಾನಿಟೆರಿ ಇಂಜನಿಯರವರು ಅಪ್ರೂ ಮಾಡಲು ರೀತಿಯಲ್ಲಿರತಕ್ಕದ್ದು.

8. ಬಂದು ಮತ, ಪಣ ಅಥವಾ ಜಾತಿಯವರಿಗೆ ವರ್ಜಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸ್ವಸ್ತ ಜನಗಳ ಬರಹ ಮೂಲಕವಾದ ಒಪ್ಪಿತದ ಮೇಲೆ ಡೆಪ್ಯೂಟಿ ಕವಿರ್ನರವರು ಮಂಜೂರ್ಮಾಡಿದ ಹೊರ್ತು ಇತರ್ಮತ, ಪಣ ಯಾ ಜಾತಿಯವರು ವಾಸಾ ಮಾಡಕೂಡದು.